6) ಸುಳ್ಯ ತಾಲ್ಲೂಕು ಜಾಲ್ಲೂರು ಎಂಬಲ್ಲಿ ದರಖಾಸ್ತು ಮೂಲಕ ಮಂಜೂರಾದ ಭೂಮಿಯನ್ನು ಅರಣ್ಯ ಇಲಾಖೆಯವರು ಬಲಾತ್ಕಾರವಾಗಿ ಆಕ್ರಮಿಸಿಕೊಂಡಿರುವುದು

ಶ್ರೀ ಕೆ. ಕುಶಲ (ಸುಳ್ಯ).— ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನ ಜಾಲ್ಲೂರು ಎಂಬಲ್ಲಿ ವಾಸ್ತವಿಸಿಕೊಂಡು ಬರುತ್ತಿರುವ ಬಡ ಪರಿಶಿಷ್ಟ ಜಾತಿಯ ಶ್ರೀ ಎ. ಐತ ಎಂಬುವುಗೆ ದರಖಾಸ್ತು ಮಂಜೂರಾದ ಸ. ನಂಬ್ರ ೩೭೧-೧೬ಬಿಯಲ್ಲಿ ೧-೮೦ ಎಕ್ರೆ ಜಮೀನು ಇದ್ದು, ಈ ಜಮೀನು ಅರಣ್ಯ ಇಲಾಖೆಯಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿ ಬರುವುದು. ಅರಣ್ಯ ಇಲಾಖೆಯವರು ಇಲಾಖೆಯ ಜಮೀನಿನಲ್ಲಿ ಕೆಲವು ವರ್ಷಗಳ ಹಿಂದೆಯೇ ಗೇರು ಕೃಷಿ ಮಾಡಿರುತ್ತಾರೆ. ಹೀಗಿರುವಾಗ ಬಡ ಪರಿಶಿಷ್ಟ ಜಾತಿಯ ಐತ ಎಂಬುವರು ಈಗ ಕಳೆದ ೧೦-೧೫ ದಿನಗಳ ಹಿಂದೆ ನಿರ್ಮಿಸಿದ ಮಣ್ಣಿ ಹಾಮಣೆಯ ಮನೆಯನ್ನು ಸದ್ರಿ ವಿಭಾಗದ ಅರಣ್ಯ ಇಲಾಖೆಯ ಅರಣ್ಯ ಪಾಲಕರ ನಾಲ್ಕು ಜನರು ಬಂದು ಬಲಾತ್ಕಾರವಾಗಿ ದರಕಾಸ್ತು ಜಮೀನಿನ ಕಟ್ಟಡವನ್ನು ಸಂಪೂರ್ಣವಾಗಿ ಕೆಡವಿ ಹಾಕಿರುತ್ತಾರೆ ಕೆಡವಿ ಹಾಕಿದ ಬಗ್ಗೆ ಅರಣ್ಯ ಇಲಾಖೆಯವರನ್ನು ವಿಚಾರಿಸಿದಾಗ ಅವರ ಜಮೀನೇ ಇಲ್ಲ. ಅರಣ್ಯ ಇಲಾಖೆಯ ಜಮೀನೇ ಎಂದು ಅಳತೆಯಿಂದ ತಿಳಿಯಲು ಕಂದಾಯ ಇಲಾಖೆಯ ತಾಲ್ಲೂಕಿನ ತಹಸೀಲ್ದಾರರಿಗೆ ಬರಕೊಂಡಿದೆ ಎಂದು ತಿಳಿಸಿರುವರು. ಇಲಾಖೆಯ ಜಮೀನು ಅಥವಾ ದರಖಾಸ್ತುದಾರನಿಗೆ ಸಂಬಂಧಿಸಿದ ಜಮೀನೇ ಎಂದು ಇತ್ಯರ್ಥವಾಗುವುದಕ್ಕೆ ಮೊದಲು, ಸದ್ರಿ ಬಡ ಪಾಯಿಯ ಮನೆಯನ್ನು ಕೆಡವಿ ಹಾಕುವ ಔಚಿತ್ಯವಾದರೂ ಏನು ? ಈಗ ಸದ್ರಿ ಬಡ ಪರಿಶಿಷ್ಟ ಜಾತಿ ಫಲಾನುಭವಿಗೆ ಕಟ್ಟಿದ ಮನೆಗೆ ಸುಮಾರು ಕಡಿಮೆ ಪಕ್ಷ ೪-೫ ಸಾವಿರ ರೂಪಾಯಿ ನಷ್ಟವಾಗಿರುತ್ತದೆ. ಅಲ್ಲದೆ ಮಳೆಗಾಲ ಸಮೀಪಿಸುತ್ತಿರುವುದರಿಂದ. ಈ ಬಡಪಾಯಿಗೆ ವಾಸ್ತವ್ಯಕ್ಕೆ ಮನೆ ಇಲ್ಲದೆ ಬೀದಿ ಪಾಲಾಗುವ ಪರಿಸ್ಥಿತಿ ಒದಗಿರುವುದು. ಈ ಕುರಿತು ಸದ್ರಿ ಮನೆ ಕೆಡವಿದ ಅರಣ್ಯ ಪಾಲಕರು (೪ ಜನರು)ಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ನಿರ್ಗತಿಕ ಮನೆ ಕಳಕೊಂಡವರಿಗೆ ಕೂಡಲೇ ತಾತ್ಕಾಲಿಕ ಪರಿಹಾರ ಕೂಡ ನೀಡುವಂತೆ ನಾನು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮಂತ್ರಿ).— ಮಾನ್ಯ ಅರಣ್ಯ ಇಲಾಖೆಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದು ಇದರ ಬಗ್ಗೆ ಸೂಕ್ತ ಕ್ರಮವನ್ನು ಕೂಡಲೇ ಕೈಗೊಳ್ಳುವಂತೆ ಹೇಳುತ್ತೇನೆ.

7) ರಾಜ್ಯದ ಹೋಟೆಲುಗಳಲ್ಲಿ ಊಟ ತಿಂಡಿಗಳ ದರವನ್ನು ಪರಿಷ್ಕರಿಸುವುದು

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).— ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಹೋಟೆಲ್, ಊಟ ತಿಂಡಿ ಮತ್ತು ವಸತಿ ದರಗಳನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರವು ಗಮನ ಸೆಳೆಯುತ್ತಾ ಈ ಕೆಳಕಂಡಂತೆ ಹೇಳಿಕೆ ನೀಡಲು ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ. ಬೇರೆ ಯಾವುದೇ ರಾಜ್ಯಗಳಲ್ಲೂ ಇಲ್ಲದ ಹೋಟೆಲ್ ಊಟ, ತಿಂಡಿ, ತಿನಸುಗಳು ಮತ್ತು ವಸತಿ ದರಗಳನ್ನು ಲಂಗುಲಗಾಮಿಲ್ಲದೆ, ಸ್ವೇಚ್ಛಾನುಸಾರವಾಗಿ ಏರುತ್ತಲೇ ಇರುತ್ತವೆ. ಅದರಲ್ಲೂ ಬೆಂಗಳೂರು, ಮೈಸೂರು ಮುಂತಾದ ನಗರ ಪ್ರದೇಶಗಳಲ್ಲೂ ಇತಿಮಿತಿ ಇಲ್ಲದ ರೀತಿಯಲ್ಲಿ ದಿನನಿತ್ಯ ನಡೆದು ಕೊಂಡು ಹೋಗುತ್ತಿವೆ. ಬಹಿರಂಗ ಮಾರುಕಟ್ಟೆಯಲ್ಲಿ ಮತ್ತು ನಿಯಂತ್ರಿತ ದರದಲ್ಲಿ ಯಾವ ತೊಂದರೆಯೂ ಇಲ್ಲದೆ ಅಗತ್ಯ ವಸ್ತುಗಳು ನ್ಯಾಯಯುತವಾದ ಬೆಲೆಗೆ ಲಭ್ಯವಿದ್ದರೂ ಲಾಭ ಮಾಡುವ ಒಂದೇ ದೃಷ್ಟಿಯಲ್ಲಿಟ್ಟುಕೊಂಡು, ಗ್ರಾಹಕರಿಗೆ ತೃಪ್ತಿಕರವಾದ ಊಟ ತಿಂಡಿ, ವಸತಿ ಒದಗಿಸುತ್ತಿರುವುದಿಲ್ಲ. ಮತ್ತು ತಾವು ಹಳಿಯುವ ಅತ್ಯಂತ ಹೇರಳ ಲಾಭದ ಅಂಕಿ ಸಂಖ್ಯೆಗಳನ್ನು ಮರೆ ಮಾಡಿ, ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಉತ್ತಮ ಗುಣ ಮಟ್ಟದ ಊಟ, ತಿಂಡಿ, ವಸತಿ ಸೌಕರ್ಯಗಳನ್ನು ಪರಿಷ್ಕೃತಗೊಳಿಸಿ ಸರಬರಾಜು ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಪೂರೈಕೆ ರಾಜ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೋಟೆಲ್ ತಿಂಡಿ ಬೆಲೆ ಕಂಟ್ರೋಲ್ ಮಾಡುವುದಕ್ಕೆ ಒಂದು ಕಮಿಟಿ ಇದೆ. ಈ ಕಮಿಟಿ ಪುನರ್ರಚನೆ ಈಗಾಗಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಮಾನ್ಯ ಸದಸ್ಯರ ಸಲಹೆಗಳನ್ನು ಶೀಘ್ರವಾಗಿ ಗಮನಕ್ಕೆ ತೆಗೆದುಕೊಳ್ಳಲಾಗುವುದು.

೮) ಪ್ರಾಥಮಿಕ ಶಾಲಾ ಶಿಕ್ಷಕರ ಸರೆಂಡರ್ ಲೀವ್ ಸ್ಯಾಲರಿಯಿಂದ ಸ್ವಲ್ಪ ಭಾಗವನ್ನು ಇಲಾಖೆಯವರು ಹಿಡಿದುಕೊಳ್ಳುತ್ತಿರುವುದು.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಇತರ ಇಲಾಖಾ ನೌಕರರಂಗಳಿಗೆ ಸರಕಾರದವರು ನೀಡುತ್ತಿರುವ 'ಸರೆಂಡರ್ ಲೀವ್ ಸ್ಯಾಲರಿ' ಸೌಲಭ್ಯವನ್ನು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರಂಗಳಿಗೂ ನೀಡಿದ್ದು, ಶಿಕ್ಷಕರು ಸದರಿ ವೇತನವನ್ನು ಪಡೆಯುವ ಸಂದರ್ಭದಲ್ಲಿ ಅದರಲ್ಲಿ ಸ್ವಲ್ಪ ಭಾಗವನ್ನು ಹಿಡಿದುಕೊಳ್ಳುತ್ತಿರುವುದರಿಂದಾಗಿ ಬಡ ಶಿಕ್ಷಕರಿಗೆ ಸರಕಾರದವರು ನೀಡುವ ಸೌಲಭ್ಯವನ್ನು ಪೂರ್ಣವಾಗಿ ಪಡೆದುಕೊಳ್ಳಲಾಗದಿರುವ ವಿಷಯದ ಬಗ್ಗೆ ಕೂಲಂಕುಷ ತನಿಖೆ ನಡೆಸಿ ಈ ರೀತಿಯಾಗುತ್ತಿರುವುದನ್ನು ತಪ್ಪಿಸುವ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಅಧ್ಯಕ್ಷರು.—ನಿಮ್ಮ ಪ್ರಶ್ನೆಗೆ ಉತ್ತರವನ್ನು ಕಳಿಸಿಕೊಡುತ್ತೇನೆ ಎಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ.

೯) ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಔಷಧ ತಯಾರಕರಂಗಳ ಹೆಚ್ಚುವರಿ ಪಟ್ಟಿಯಲ್ಲಿದ್ದವರನ್ನು ಕೆಲಸಕ್ಕೆ ತೆಗೆದುಕೊಳ್ಳದಿರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) —ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಔಷಧ ತಯಾರಕರ ಹುದ್ದೆಗೆ ಸೆಪ್ಟಂಬರ್, ಅಕ್ಟೋಬರ್ ತಿಂಗಳಂಗಳಲ್ಲಿ ಆಯ್ಕೆ ಸಮಿತಿಯಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ''ನೀವುಗಳು ಔಷಧ ತಯಾರಕರ ಹುದ್ದೆಗೆ ಆಯ್ಕೆ ಆಗಿದ್ದೀರಿ'' ಹೆಚ್ಚುವರಿ ಪಟ್ಟಿಯಲ್ಲಿ ಇಡಲಾಗಿದೆ ಎಂದು ತಿಳಿಸಿದ್ದು, ಈವರೆಗೆ ಅವರನ್ನು ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ. ಇದರಿಂದ ನಿರುದ್ಯೋಗಿ ಯುವಕರಿಗೆ ತೊಂದರೆ ಆಗಿದ್ದು ಕೆಲವರಿಗೆ ವಯೋಮಿತಿ ಸಹ ಮೀರುತ್ತಿದೆ.

ಈ ಹುದ್ದೆಗಳು ಖಾಲಿ ಇದ್ದು ಸಂದರ್ಶನ ಸಮಿತಿ ಮೂಲಕ ಆಯ್ಕೆ ಆಗಿದ್ದರೂ ಈವರೆಗೆ ಅವರನ್ನು ನೇಮಕ ಮಾಡಿಕೊಂಡಿಲ್ಲದ ಕಾರಣ ತಕ್ಷಣ ಅವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಬಗ್ಗೆ ಸರ್ಕಾರದ ಹೇಳಿಕೆಯನ್ನು ತಿಳಿಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಮಂತ್ರಿ, ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ ಔಷಧ ತಯಾರಕರ ಆಯ್ಕೆ ಇಲಾಖಾ ನೇಮಕಾತಿ ಸಮಿತಿಯು ದಿನಾಂಕ ೨೯-೧೦-೮೭ ರಂದು ನಡೆದ ಸಭೆಯಲ್ಲಿ ಕೆಲವು ಅಭ್ಯರ್ಥಿಗಳನ್ನು ಆಯ್ಕೆ ಮಾಡಿತ್ತು. ಅದರ ಪ್ರಕಾರ ಮುಖ್ಯ ಪಟ್ಟಿಯಲ್ಲಿ ೧೫೦ ಅಭ್ಯರ್ಥಿಗಳನ್ನು ಮತ್ತು ಹೆಚ್ಚುವರಿ ಪಟ್ಟಿಯಲ್ಲಿ ೧೫ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಆದರೆ ಅವರಿಗೆ ನೇಮಕಾತಿ ಮಾಡಬೇಕೆಂದು ಕ್ರಮ ತೆಗೆದುಕೊಳ್ಳಬೇಕೆನ್ನುವ ಸಮಯದಲ್ಲಿ ರಾಜ್ಯ ಸರ್ಕಾರವು ದಿನಾಂಕ ೧೦-೧೧-೮೭ ರಂದು ಹೊರಡಿಸಿದ ಸರ್ಕಾರದ ಆದೇಶ ಸಂಖ್ಯೆ/ಎಫ್‌ಡಿ ೭ ಬಿಇಎಂ ೮೭ ಅದರಲ್ಲಿ ಆರ್ಥಿಕ ಮಿತವ್ಯಯದ ಆದೇಶವನ್ನು ಹೊರಡಿಸಿತು. ಆದ್ದರಿಂದ ಅದರ ಸಡಿಲಿಕೆಗಾಗಿ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದ್ದು, ಅದನ್ನು ಆರ್ಥಿಕ ಮಿತವ್ಯಯದಿಂದ ಸಡಿಲಿಸಿದ ನಂತರ ನವೀಕರಿಸಬೇಕಾಗಿ ಸೂಚಿಸಲಾಗಿದೆ. ಆದ್ದರಿಂದ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ನೇಮಕಾತಿ ಮಾಡಲು ಸಾಧ್ಯವಾಗಲಿಲ್ಲ. ಆದರೂ, ಆದಷ್ಟು ಬೇಗನೆ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.